# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

**ಸಿ.ಸಿ. ನಂಃ 21/2019**

**ಸಿ.ಡಬ್ಲೂಃ 02 ಪಿಡಬ್ಲೂಃ 03**

ಸಾಕ್ಷಿದಾರರ ಹೆಸರುಃ ಎ. ಮದುಸುಧನ ತಂದೆಃ ಎ. ಕಾಳಪ್ಪ
ವಯಸ್ಸುಃ 47 ವರ್ಷ
ಉದ್ಯೋಗಃ ಲೆಕ್ಕ ಸಹಾಯಕರು ತಾಲೂಕು ಪಂಚಾಯಿತಿ, ಹಡಗಲಿ
ಸಾಕೀನಃ ಹಡಗಲಿ.

ದಿಃ**19-01-2026** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ ;

ನಾನು **2016** ರಿಂದ ಫೇಬ್ರುವರಿ **2018** ರವರೆಗೆ ನಾನು ಹಿರೇಹಡಗಲಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕೆಲಸ ಮಾಡಿರುತ್ತೇನೆ.

**02.** ದಿಃ**27-08-2017** ರಂದು ಸಂಜೆ. **05.00** ಟಂಟೆ ಸುಮಾರಿಗೆ ಚಾ.ಸಾ.**11** ರವರೊಂದಿಗ ಗಣೇಶ ಚತುರ್ಥಿ ಪ್ರಯುಕ್ತ ಬಂದೂಬಸ್ತ ಕರ್ತವ್ಯದಲ್ಲಿದ್ದಾಗ ಮಾಗಳ ಹಗರನೂರು ಗ್ರಾಮದ ಹತ್ತಿರ ಇಲಾಖಾ ಜೀಪಿನಲ್ಲಿ ಬರುತ್ತಿದ್ದಾಗ ಚಾ.ಸಾ.**11** ರವರಿಗೆ ಮಾನ್ಯರ ಮಸಲವಾಡ ಗ್ರಾಮದಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುವ ಕುರಿತು ಹಗರನೂರು ಕೆರೆ ಹತ್ತಿರ ಇದ್ದಾಗ ಖಚಿತ ಮಾಹಿತಿ ಬಂದಿರುತ್ತದೆ. ಆಗ ಚಾ.ಸಾ.**11** ರವರೊಂದಿಗೆ ಜೀಪಿನಲ್ಲಿದ್ದ ನಾನು ಮತ್ತು ಚಾ.ಸಾ.**01, 3** ರಿಂದ **5** ರವರು ಸೇರಿ ಮಾನ್ಯರ ಮಸಲವಾಡ ಗ್ರಾಮಕ್ಕೆ **05.30** ಗಂಟೆಗೆ ಹೋಗಿರುತ್ತೇವೆ. ಸದರಿ ಗ್ರಾಮದ ತೇರಿನ ಗಡ್ಡೆಯ ಹತ್ತಿರ ಹೋಗಿ ಜೀಪನ್ನು ನಿಲ್ಲಿಸಿ ಚಾ.ಸಾ.**11** ರವರು ಚಾ.ಸಾ.**04** ರವರಿಗೆ ದಾಳಿ ಮಾಡಲು ಇಬ್ಬರು ಪಂಚರನ್ನು ಕರೆತರಲು ತಿಳಿಸಿದ್ದರಿಂದ ಚಾ.ಸಾ.**04** ರವರು ಪಂಚರಾದ ಚಾ.ಸಾ.**06** ಮತ್ತು **07** ರವರನ್ನು ಉಪನಾಯಕನಹಳ್ಳಿಯಿಂದ ಕರೆದುಕೊಂಡು ಬಂದು ಚಾ.ಸಾ.**11** ರವರು ಮುಂದೆ ಹಾಜರುಪಡಿಸಿರುತ್ತಾರೆ. ಆಗ ಚಾ.ಸಾ.**11** ರವರು ತಮಗೆ ಬಂದ ಮಾಹಿತಿಯನ್ನು ತಿಳಿಸಿ ಪಂಚರಾಗಿ ಸಹಕರಿಸಬೇಕೆಂದು ಕೇಳಿಕೊಂಡ ಮೇರೆಗೆ ಅವರು ಪಂಚರಾಗಿ ಒಪ್ಪಿದ್ದರಿಂದ ನಾವುಗಳು ಪಂಚರೊಂದಿಗೆ ಸದರಿ ಗ್ರಾಮದ ನೀರಿನ ಟ್ಯಾಂಕ ಹತ್ತಿರ ಹೋಗಿ ನೋಡಲಾಗಿ ಇಬ್ಬರು ವ್ಯಕ್ತಿಗಳು ಮಧ್ಯ ಮಾರಾಟ ಮಾಡುತ್ತಿರುವುದನ್ನು ಕಂಡು ನಾವು ಹೋಗುತ್ತಿದ್ದಂತೆ ಸದರಿ ಇಬ್ಬರು ವ್ಯಕ್ತಿಗಳು ಓಡಿ ಹೋಗಿರುತ್ತಾರೆ. ಸದರಿ ವ್ಯಕ್ತಿಗಳು ಬಿಟ್ಟು ಹೋಗಿದ್ದ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ ಅದರಲ್ಲಿ **180** ಎಮ್.ಎಲ್.ನ ರಾಜಾ ವಿಸ್ಕೀಯ **20** ಬಾಟಲಗಳು ಮತ್ತು **90** ಎಮ್.ಎಲ್.ನ ಬೆಂಗಳೂರು ಮಾಲ್ಟ ವಿಸ್ಕೀಯ **18** ಪೌಚಗಳು ಇದ್ದವು, ಸದರಿ ಮಧ್ಯದ ಬಾಟಲ ಮತ್ತು

ಪೌಚಗಳನ್ನು ಚಾ.ಸಾ.**11** ರವರು ಪಂಚರ ಸಮಕ್ಷಮ ಅಮಾನತ್ತು ಪಡೆಸಿಕೊಂಡು ಸದರಿ ಮಧ್ಯದ ಜೊತೆಗಿದ್ದ ನಗದು ರೂ.**250/-** ಹಣವನ್ನು ವಶಪಡಿಸಿಕೊಂಡು ಸದರಿ ಸ್ಥಳದಲ್ಲಿ ಚಾ.ಸಾ.**11** ರವರು ಪಂಚರ ಸಮಕ್ಷಮ ಸಂಜೆ. **05.45** ರಿಂದ **06.30** ಗಂಟೆಯವರೆಗೆ ಪಂಚನಾಮೆ ಜರೂಗಿಸಿರುತ್ತಾರೆ. ನಂತರ ಚಾ.ಸಾ.**11** ರವರು ಸದರಿ ಸ್ಥಳದಲ್ಲಿ ದೊರೆತ ಮಧ್ಯ ಮತ್ತು ಹಣವನ್ನು ಮತ್ತು ಪಂಚನಾಮೆಯೊಂದಿಗೆ ಠಾಣೆಗೆ ವಾಪಸ್ತು ಬಂದು ದೂರು ದಾಖಲಿಸಿರುತ್ತಾರೆ. ಆ ದಿನ ಓಡಿ ಹೋದ ಆರೋಪಿತ ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಿದ್ದು ಅವರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರ ಗೈರು ಹಾಜರು ವಿನಾಯಿತಿ ಕೋರಿ ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿದ್ದು ಅವರನ್ನು ಗುರುತಿಸಲು ಯಾವುದೇ ತಕರಾರು ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಇಂದು ನ್ಯಾಯಾಲಯದ ಮುಂದೆ ಇರುವ ಮು.ಮಾ.**01** ಮತ್ತು **02** ನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಕೆ.ಕೆ. ವಕೀಲರಿಂದಃ</u>

**03.** ದಾಳಿಗೆ ನಾವು **5** ಜನ ಹೋಗಿರುತ್ತೇವೆ. ಆ ದಿನ ಯಾವ ಪ್ರದೇಶದಲ್ಲಿ ಎಷ್ಟು ಸಮಯ ಗಸ್ತು ಮಾಡಿರುತ್ತೇವೆ ಎಂದು ನೆನಪು ಇರುವುದಿಲ್ಲ. ತೇರುಬಿದಿಯ ಯಾವ ದಿಕ್ಕಿಗೆ ನಮ್ಮ ವಾಹನವನ್ನು ನಿಲ್ಲಿಸಿರುತ್ತೇವೆ ಎಂದು ನೆನಪು ಇರುವುದಿಲ್ಲ. ತೇರುಬಿದಿಯ ದಕ್ಷಿಣ ದಿಕ್ಕಿಗೆ **Over head tank** ಇರುತ್ತದೆ. ತೇರುಬಿದಿಯಿಂದ **Over head tank** ಗೆ **100** ರಿದ **150** ಮೀಟರ ದೂರ ಆಗುತ್ತದೆ. ಸಾರ್ವಜನಿಕರು ಎಷ್ಟು ಜನ ಅಲ್ಲಿ ಸೇರಿದ್ದರು ಎಂದು ಗೊತ್ತಿರುವುದಿಲ್ಲ. ಆರೋಪಿತರ ಹೆಸರನ್ನು ಹೇಳಿದವರ ಮಾಹಿತಿ ನನಗೆ ಇರುವುದಿಲ್ಲ. ದಾಳಿ ಮಾಡಿದ ಸ್ಥಳದಲ್ಲಿ ಛಾಯಾ ಚಿತ್ರವನ್ನು ತೆಗೆದಿರುವ ನೆನಪು ಇರುವುದಿಲ್ಲ. ಜಪ್ತು ಮಾಡಿದ **250/-** ಹಣದ ಮುಖಬೆಲೆಯನ್ನು ಹೇಳಲು ಆಗುವುದಿಲ್ಲ.

**04.** ಪಂಚರ ಒಟ್ಟು ಎಷ್ಟು ಸಹಿಯನ್ನು ಪಡೆದಿರುತ್ತೇವೆ ಎಂದು ನೆನಪು ಇರುವುದಿಲ್ಲ. ಮಸಲವಾಡದಿಂದ ಉಪನಾಯಕನಹಳ್ಳಿ ಅಂದಾಜು ಎಷ್ಟು ಕಿಲೋಮೀಟರ ದೂರದಲ್ಲಿ ಇರುತ್ತದೆ ಎಂದು ಗೊತ್ತಿರುವುದಿಲ್ಲ. ಮಸಲವಾಡದಿಂದ ಉಪನಾಯಕನಹಳ್ಳಿಗೆ ಹೋಗಿ ಯಾರನ್ನಾದರೂ ಕರೆದುಕೊಂಡು ಬರಬೇಕಾದರೆ ಸುಮಾರು **1** ಗಂಟೆ ಆಗುತ್ತದೆ ಎಂದರೆ ಆಗಬಹುದು. ಪಂಚನಾಮೆಯಲ್ಲಿ ಇಬ್ಬರು ಪಂಚರು ಮತ್ತು ಚಾ.ಸಾ.**11** ರವರ ಸಹಿಯನ್ನು ಪಡೆದಿರುತ್ತೇನೆ. ನಾವು **27-08-2017** ರಂದು ಮಸಲವಾಡ ಗ್ರಾಮಕ್ಕೆ ದಾಳಿ ಮಾಡಲು ಹೋಗಿರುತ್ತೇವೆ ಅಲ್ಲಿ ಆರೋಪಿತರು ಅಕ್ರಮವಾಗಿ ಮಧ್ಯವನ್ನು ಮಾರಾಟ ಮಾಡುತ್ತಿದ್ದರು ನಮ್ಮನ್ನು ನೋಡಿ ಅವರು ಓಡಿ ಹೋಗಿರುತ್ತಾರೆ ಎಂಬ ಮಾತು ಸುಳ್ಳು ಎಂದರೆ ಸರಿಯಲ್ಲ. ದಾಳಿ ಮಾಡಿದ ಸ್ಥಳದಲ್ಲಿ ಮುದ್ದೆಮಾಲನ್ನು ಜಪ್ತು ಪಡೆಸಿಕೊಂಡು

ಪಂಚನಾಮೆಯನ್ನು ಮಾಡಿರುತ್ತೇವೆ, ಪಂಚರ ಸಹಿಯನ್ನು ಪಡೆದಿರುತ್ತೇವೆ, ಮುದ್ದೆಮಾಲನ್ನು ರಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇವೆ ಎಂಬ ಮಾತು ಸುಳ್ಳು ಎಂದರೆ ಸರಿಯಲ್ಲ. ನಾನು ಯಾವುದೇ ದಾಳಿಗೆ ಹೋಗಿರುವುದಿಲ್ಲ,ಸ ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವ ಮಾತು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಕೂಡ ಅಂಕಿಸಂಖ್ಯೆಗೋಸ್ಕರ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ, ನನ್ನ ಸಮಕ್ಷಮ

**Sd/-**

(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ
ದಂಡಾಧಿಕಾರಿಗಳು., ಹಡಗಲಿ.